# ರಾಧಿಕಾಳ ಯಶೋಗಾಥೆಯ ಬೆಸುಗೆ ಈ ಅಮ್ಮ

**ಮಾಲತಿ ಉಮಾರ್ಜಿ**
**ಉದಯ ವಾಹಿನಿಯ 'ರಾಧಿಕಾ' ಧಾರಾವಾಹಿಯ ಜಾನಕಿ ಪಾತ್ರಧಾರಿ**



◆ ನಿಮ್ಮ ಪರಿಚಯ ಹೇಳಿ.

ಹೆಸರು ಮಾಲತಿ ಉಮಾರ್ಜಿ. ನನ್ನ ತಾತ ಮಧ್ವರಾಜ್ ಉಮಾರ್ಜಿ ನಾಟಕಕಾರರಾಗಿದ್ದರು. ಹನುಮಂತರಾಯ, ಗರುಡ ಸದಾಶಿವರಾಯ ಅವರ ಕಂಪನಿ ಮತ್ತು ಕೊಲಂಬೊ ಕಂಪನಿಯಲ್ಲಿಯೂ ನಟಿಸುತ್ತಿದ್ದರು. ಅವರ ಮನೆತನದಲ್ಲಿ ನಾನು ನನ್ನ ಅಣ್ಣ ಅವಳಿಗಳಾಗಿ ಹುಟ್ಟಿದೆವು. ನನ್ನ ಅಣ್ಣ ಮಧು ಎಂಜಿನಿಯರ್ ಆಗಿದ್ದಾನೆ. ತಂದೆ ವಸಂತ ರಾವ್ ಉಮಾರ್ಜಿ, ತಾಯಿ ಕುಸುಮಾ. ಬಾಗಲಕೋಟೆ ಜಿಲ್ಲೆ ಬೀಳಗಿಯಲ್ಲಿ ಓದಿದೆ. ರೇಡಿಯೊ ಕೇಳಿಯೇ ನಾನು ಸಂಗೀತ ಅಭ್ಯಾಸವನ್ನು ಆರಂಭಿಸಿದೆ. ನಾಟಕದಲ್ಲಿ ಅಭಿನಯ ರಕ್ತಗತವಾಗಿತ್ತು. ಮೂರನೇ ವರ್ಷದಲ್ಲೇ ಪಾತ್ರವನ್ನು ಮಾಡಿದ್ದೆ. ಸಂಗೀತ ನನಗೆ ಹೆಚ್ಚು ಆಪ್ತವಾಗಿತ್ತು. ಕಾಲೇಜಿಗೆ ಧಾರವಾಡಕ್ಕೆ ಸೇರಿದ ಮೇಲೆ ಸಂಗೀತ (ಸಿತಾರ್, ಹಿಂದೂಸ್ತಾನಿ ಗಾಯನ) ಅಭ್ಯಾಸವನ್ನು ಆರಂಭಿಸಿದೆ. ರೇಡಿಯೊದಲ್ಲಿ ಲಘು ಸಂಗೀತ ಮತ್ತು ನಾಟಕ ಮಾಡುತ್ತಿದ್ದೆ. ಧ್ವನಿಗೆ ಹಾನಿಯಾಗುತ್ತದೆ ಎಂದು ರಂಗನಾಟಕವನ್ನು ನಿಲ್ಲಿಸಿದೆ. 1991ರಲ್ಲಿ ಗಿರೀಶ್ ಕಾರ್ನಾಡರ 'ಹಯವದನ'ದಲ್ಲಿ ಪದ್ಮಿನಿ ಪಾತ್ರ ಮಾಡುವ ಅವಕಾಶ ಆಕಸ್ಮಿಕವಾಗಿ ಬಂತು. ನಂತರ ಟಿ.ಪಿ. ಕೈಲಾಸಂ ಅವರ 'ಟೊಳ್ಳು ಗಟ್ಟಿ'ಯಲ್ಲಿ ನಟಿಸಿದೆ. ಮತ್ತೆ ನಾಟಕದ ಸಂಪರ್ಕ ಬೆಳೆಯಿತು. ಸರದೇಶಪಾಂಡೆ ಅವರನ್ನು ಮದುವೆ ಆಗಲು ಇದುವೇ ಕಾರಣ ಆಯಿತು. 1999 ಬೆಂಗಳೂರಿಗೆ ಬಂದೆವು. ಶ್ರೀಕಾಂತ್ ಕುಲಕರ್ಣಿ ನಿರ್ದೇಶನದ 'ಅಭಿಮಾನ್' ಮೂಲಕ ಕಿರುತೆರೆಗೆ ಪ್ರವೇಶ ಮಾಡಿದೆ. ಇದುವರೆಗೆ 30 ಸಾವಿರ ಕಂತಿನಷ್ಟು ಧಾರಾವಾಹಿಯಲ್ಲಿ ನಟಿಸಿದ್ದೇನೆ. 90 ಸಿನಿಮಾಗಳಲ್ಲಿಯೂ ಮಾಡಿದ್ದೇನೆ. ಸದ್ಯ ಉದಯದಲ್ಲಿ ರಾಧಿಕಾ ಅಮ್ಮಳಾಗಿ ಜಾನಕಿ ಪಾತ್ರ ನಿರ್ವಹಿಸುತ್ತಿದ್ದೇನೆ.

◆ 'ರಾಧಿಕಾ' ಕಥೆಗೆ ಜಾನಕಿ ಎಷ್ಟು ಪ್ರಸ್ತುತ ಆಗುತ್ತಾರೆ?

ಈ ಉಭಯ ಜೀವಗಳು ಒಂದಕ್ಕೊಂದು ಪೂರಕವಾಗಿ ಕಥೆಯನ್ನು ಬೆಸೆದುಕೊಂಡಿವೆ ಎಂದು ಅನ್ನಿಸುತ್ತದೆ. ಒಬ್ಬರಿಗೊಬ್ಬರು ಪ್ರೊಟೆಕ್ಟ್ ಮಾಡುತ್ತಾರೆ. ರಾಧಿಕಾ ತನ್ನ ತಾಯಿಯ ಸುಖವನ್ನು ಬಯಸುತ್ತಾಳೆ. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಳ್ಳುತ್ತಾಳೆ. ತಾಯಿ ತನ್ನ ಮಕ್ಕಳನ್ನು ಪೋಷಣೆ ಮಾಡಲು ಅನುಭವಿಸಿದ ಕಷ್ಟವನ್ನು ಅರಿತಿದ್ದಾಳೆ. ಹಾಗಾಗಿ ತನ್ನ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುವ ಆಸೆ ಅವಳದು. ಇಂತಹ ಕುಟುಂಬಗಳು ಸಾಕಷ್ಟು ಇವೆ. ಒಬ್ಬ ಹುಡುಗಿ ಮನೆಯನ್ನು ನಿರ್ವಹಣೆ ಮಾಡುವುದು ಸುಲಭ ಅಲ್ಲ. ರಾಧಿಕಾಗೂ ಜಾನಕಿ ಬೆನ್ನೆಲುಬಾಗಿ ನಿಲ್ಲುತ್ತಾಳೆ. ರಾಧಿಕಾಳ ತಂಗಿ ವಂಚನೆಯಿಂದ ಬಸುರಿಯಾಗುತ್ತಾಳೆ. ಅದೇ ಹುಡುಗನಿಗೆ ತನ್ನ ತಂಗಿಯನ್ನು ಮದುವೆ ಮಾಡಿಸುತ್ತಾಳೆ. ಬೇಜವಾಬ್ದಾರಿಯ ಅಣ್ಣ ದಿನವಿಡೀ ಹೆಂಡದ ಅಮಲಿನಲ್ಲಿ ಇರುತ್ತಾನೆ. ಅಂತಹ ಕರುಣಾಜನಕ ಕಥೆಯ ಭಾಗ ಆಗಿರುವುದು ಸಮಾಧಾನ ನೀಡಿದೆ.

◆ ಧಾರಾವಾಹಿಯಲ್ಲಿ ರಂಜನೆಗಿಂತ ಗೋಳಾಟವೇ ಹೆಚ್ಚು ಎಂದು ದೂರುವುದು ಏಕೆ?

ಕೆಲವೊಂದು ಮನೆಗಳಲ್ಲಿ ಸಣ್ಣ ಸಣ್ಣ ಸಂಗತಿಗಳಲ್ಲೂ ತುಂಬ ಖುಷಿಯನ್ನು ಪಡುತ್ತಾರೆ. ಏನಾದರೂ ತೊಂದರೆ ಎದುರಾದರೆ ತುಂಬ ಕಷ್ಟವನ್ನು ಅನುಭವಿಸುತ್ತಾರೆ. ನಮ್ಮ ಮನೆಯಲ್ಲಿ ತೊಂದರೆ ಜಾಸ್ತಿ ಇದೆ. ರಾಧಿಕಾಳ ಸಹಿಷ್ಣು ಗುಣ, ಪ್ರೀತಿ, ಜಾಣ್ಮೆ, ಧೈರ್ಯವನ್ನು ತೋರಿಸಲು ಇಂತಹ ಕಷ್ಟ ಅನಿವಾರ್ಯ. ಅದರ ಜೊತೆ ಕಷ್ಟವನ್ನು ಎದುರಿಸುವ ದಾರಿಗಳನ್ನೂ ಇದು ತೋರಿಸುತ್ತದೆ. ಕಷ್ಟ ಎಲ್ಲರಿಗೂ ಬರುತ್ತದೆ. ಅದನ್ನು ಜಾಣ್ಮೆಯಿಂದ ಬಗೆಹರಿಸಿಕೊಳ್ಳಲು ಯತ್ನಿಸಬೇಕು. ಸಮಾಧಾನದಿಂದ ಎಂತಹ ಸಮಸ್ಯೆಯನ್ನೂ ಪರಿಹರಿಸಬಹುದು ಎನ್ನುವುದು ರಾಧಿಕಾಳಿಂದ ಗೊತ್ತಾಗುತ್ತದೆ. ಜನ ಚೆನ್ನಾಗಿಲ್ಲ ಎನ್ನಬಹುದು ಆದರೆ ಅದು ಹಾಗಿಲ್ಲ. ನನ್ನ ಪಾತ್ರವನ್ನೇ ಉದಾಹರಣೆ ತೆಗೆದುಕೊಂಡರೆ ವೀಕ್ಷಕರು ಎಂದೂ ಮಾಲತಿಯಾಗಿ ನೋಡಲ್ಲ. ಎಲ್ಲರೂ ಪಾತ್ರದಲ್ಲಿಯೇ ನನ್ನ ನೋಡುತ್ತಾರೆ. ಎಲ್ಲ ಪಾತ್ರಗಳೂ ಒಂದಲ್ಲ ಒಂದು ಮನೆಯಲ್ಲಿ ಇರುತ್ತಾರೆ. ಕೆಟ್ಟದ್ದು ಇದ್ದಾಗಲೇ ಒಳ್ಳೆಯದನ್ನು ತೋರಿಸಲು ಸಾಧ್ಯ. ನಾವು ಒಳ್ಳೆಯದನ್ನು ಮಾತ್ರ ತೆಗೆದುಕೊಳ್ಳಬೇಕು.

◆ ನಿಮ್ಮ ಮರೆಯದ ಪಾತ್ರಗಳ ಬಗ್ಗೆ ಹೇಳಿ?

ನಾನು ಪ್ರತಿ ಪಾತ್ರವನ್ನು ಪ್ರೀತಿಯಿಂದಲೇ ಮಾಡಿದ್ದೇನೆ. ಬಹುತೇಕ ಎಲ್ಲ ಭಿನ್ನ ಪಾತ್ರಗಳು ಸಿಕ್ಕಿವೆ. ಅವು ನನಗೆ ಅಪಾರ ಅನುಭವವನ್ನೂ ನೀಡಿವೆ. ಎಲ್ಲ ಪಾತ್ರಗಳು ಖುಷಿಕೊಟ್ಟಿವೆ. ಒಮ್ಮೆ ನಾನು ಮೇಕಪ್ ಹಾಕಿದರೆ ಸಂಪೂರ್ಣ ಪಾತ್ರದಲ್ಲಿ ಮುಳುಗಿಬಿಡುತ್ತೇನೆ. ಮನೆಗೆ ಬಂದರೂ ಅದೇ ಮನಸ್ಥಿತಿಯಲ್ಲಿ ಇರುತ್ತೇನೆ. ಮನೆಯಲ್ಲಿ ಕನ್ನಡಿ ಮುಂದೆ ನಿಂತರೆ ಹೀಗೂ ಮಾಡಬಹುದಿತ್ತು ಎಂದು ನನಗೆ ನಾನೇ ಯೋಚಿಸಿದ್ದೇನೆ. 'ಕಾದಂಬರಿ'ಯಲ್ಲಿ ವಿಲನ್ ಪಾತ್ರ ಮಾಡಿದ್ದೆ. ಜನ ಇನ್ನೂ ವಸುಂಧರಾ ಎಂದೇ ಕರೆಯುತ್ತಾರೆ. ಅದರಲ್ಲಿ ಕೊನೆಗೆ ಭಿಕ್ಷುಕಿ ವೇಷ ಹಾಕಬೇಕಾದ ಸನ್ನಿವೇಶ ಬರುತ್ತದೆ. ಚಿತ್ರೀಕರಣ ಸಂದರ್ಭದಲ್ಲಿ ನನ್ನನ್ನು ನಿಜಕ್ಕೂ ಭಿಕ್ಷುಕಿ ಎಂದೇ ಜನ ಅಂದುಕೊಂಡಿದ್ದರು. 'ಮನ್ವಂತರ'ದ ಪಾತ್ರವೂ ಅದ್ಭುತವಾಗಿತ್ತು. ಸಿನಿಮಾಕ್ಕಿಂತ ಧಾರಾವಾಹಿಯಲ್ಲೇ ನಾನು ಹೆಚ್ಚು ಖುಷಿಯನ್ನು ಅನುಭವಿಸಿದ್ದೇನೆ. ಇಲ್ಲಿಯ ಪಾತ್ರಗಳೂ ಅಷ್ಟೇ ಹಸುರಾಗಿ ಮನದಲ್ಲಿ ಉಳಿದಿವೆ.

■ **ರಾಘವೇಂದ್ರ ಕೆ.**